**ಕರ್ನಾಟಕ ಸರ್ಕಾರ**
**ಸಾರಿಗೆ ಇಲಾಖೆ**

**ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ,**
**ಅತ್ತಿಬೆಲೆ ತನಿಖಾ ಠಾಣೆ, ಆನೇಕಲ್ ತಾಲ್ಲೂಕು,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

ಬೆಂಗಳೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್.07, ಹೊಸೂರು–ಬೆಂಗಳೂರು ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ದೂರವಾಣಿ ಸಂಖ್ಯೆ:080–27844737. ಮಾಹಿತಿ ಹಕ್ಕು ಅಧಿನಿಯಮ 4(1) (ಬಿ) ಪ್ರಕಾರ ದಿನಾಂಕ: 31.03.2016 ರ ಅಂತ್ಯಕ್ಕೆ ಇರುವಂತೆ, ಇರುವ ಮಾಹಿತಿ.

**i. ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು :**

ಅತ್ತಿಬೆಲೆ ತನಿಖಾ ಠಾಣೆಯು ಕರ್ನಾಟಕ ರಾಜ್ಯದ ಒಂದು ವಾಹನ ತಪಾಸಣೆ ನಡೆಸುವ ತನಿಖಾ ಠಾಣೆಯಾಗಿರುತ್ತದೆ. ಇದು ಕರ್ನಾಟಕ ರಾಜ್ಯದ ತಮಿಳುನಾಡು ಗಡಿಯಲ್ಲಿರುತ್ತದೆ. ಈ ತನಿಖಾ ಠಾಣೆಯು ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ) ಬೆಂಗಳೂರು, ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, "ಎ" ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027 ರವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ಉಪ ಸಾರಿಗೆ ಆಯುಕ್ತರು, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು–560001, ರವರ ಅಧೀನದಲ್ಲಿ ಸಹ ಕಾರ್ಯನಿರ್ವಹಿಸುತ್ತಿದೆ.

**ಅಧಿಕಾರಿಗಳ / ಸಿಬ್ಬಂದಿ ಸಂಖ್ಯೆ**

| ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳು |
|---|---|---|---|
| ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | 2 | 2 | 1 |
| ಚಾಲಕ | 1 | 1 | – |

ಖಾಯಂ ಸಿಬ್ಬಂದಿಯಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇಬ್ಬರು ಮತ್ತು ಒಬ್ಬರು ಚಾಲಕರಿದ್ದು ಮೋಟಾರು ವಾಹನ ನಿರೀಕ್ಷಕರು/ಹಿರಿಯ ಮೋಟಾರು ವಾಹನ ನಿರೀಕ್ಷಕರು ಇವರು ನಿಯೋಜನೆ ಮೇರೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ ಬೆಂಗಳೂರು (ಜಯನಗರ) ಇಲ್ಲಿಂದ ಬಂದು ಕೆಲಸ ನಿರ್ವಹಿಸುತ್ತಾರೆ. ವಿಷಯ ನಿರ್ವಾಹಕರು ಮತ್ತು ಗ್ರೂಪ್ 'ಡಿ' ಯವರನ್ನು ಬೆಂಗಳೂರಿನ ವಿವಿಧ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ಕೆಲಸ ನಿರ್ವಹಿಸಲು ನಿಯೋಜಿಸಲಾಗುತ್ತಿದೆ.

**ii. ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳು ಮತ್ತು ಕರ್ತವ್ಯಗಳು :**

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಛೇರಿಗೆ ಮುಖ್ಯಸ್ಥರು ಮತ್ತು ಕಛೇರಿಯ ಆಡಳಿತ ಮೇಲ್ವಿಚಾರಕರು ಮತ್ತು ದಿನ ನಿತ್ಯದ ರಾಜಸ್ವ ಸಂಗ್ರಹಣೆ ಪರಿಶೀಲನೆ, ಸರಕು ಸಾಗಾಣೆ ಮತ್ತು ಪ್ರವಾಸಿ ವಾಹನಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಸಂಚರಿಸಲು ತಾತ್ಕಾಲಿಕ/ವಿಶೇಷ ರಹದಾರಿಗಳನ್ನು ನೀಡುವುದು.

ಹಿರಿಯ ಮೋಟಾರು ವಾಹನ ನಿರೀಕ್ಷಕರು ಮತ್ತು ಮೋಟಾರು ವಾಹನ ನಿರೀಕ್ಷಕರು ಮೋಟಾರು ವಾಹನಗಳ ಕಾಯ್ದೆ, 1988 ರ ಕಲಂ 213(5) ರಂತೆ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 259(2) ರಂತೆ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ನೀಡಿರುವ ಯಾವುದೇ ಸೂಚನೆ ಆದೇಶ ಮತ್ತು ನಿರ್ದೇಶನದಂತೆ ಕಾರ್ಯನಿರ್ವಹಿಸುವುದು, ವಾಹನಗಳ ದಾಖಲಾತಿ ಪರಿಶೀಲಿಸುವುದು, ಮೋಟಾರು ಅಧಿ ನಿಯಮ 1988 ಮತ್ತು ಅದರ ಅಡಿಯಲ್ಲಿನ ನಿಯಮಗಳನ್ನು ಜಾರಿಗೊಳಿಸಿರುವುದನ್ನು ಪರಿಶೀಲಿಸಿ ಉಲ್ಲಂಘಿಸಿರುವ ವಾಹನಗಳಿಗೆ ಪ್ರಕರಣಗಳನ್ನು ದಾಖಲಿಸಿ ಸರ್ಕಾರ ನಿಗಧಿಪಡಿಸಿರುವ ದಂಡ ಮತ್ತು ತೆರಿಗೆ ವಸೂಲಿ ಮಾಡುವುದು.

ವಿಷಯ ನಿರ್ವಾಹಕರು ಕಛೇರಿಯ ಕಡತಗಳನ್ನು ಮಂಡಿಸುವುದು, ಸರ್ಕಾರದ ಖಾತೆಗೆ ಜಮೆ ಮಾಡುವುದು ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ನೀಡಿರುವ ಯಾವುದೇ ಸೂಚನೆ, ಆದೇಶ ಮತ್ತು ನಿರ್ದೇಶನದಂತೆ ಕಾರ್ಯನಿರ್ವಹಿಸುವುದು.

**iii. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಖಾಯಂ ವಿಧಾನ :**

ಕಛೇರಿಯಲ್ಲಿ ಸಂಗ್ರಹಣೆ ಮಾಡಿರುವ ರಾಜಸ್ವ ಸರ್ಕಾರದ ಖಾತೆಗೆ ಜಮೆ ಮಾಡುವುದನ್ನು ಪರಿಶೀಲನೆ, ಪತ್ರ ವ್ಯವಹಾರಗಳು ಮತ್ತು ಕಛೇರಿಯ ಉಸ್ತುವಾರಿ, ಸಾರ್ವಜನಿಕ ಮಾಹಿತಿ ಅಧಿಕಾರಿಯ ಕರ್ತವ್ಯಗಳು, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗಿರುತ್ತದೆ.

**iv. ಕಾರ್ಯಗಳ ನಿರ್ವಹಣೆಗೆ ರೂಪಸಿರುವ ಸೂತ್ರಗಳು :**

ಕಛೇರಿಯ ಮುಖ್ಯಸ್ಥರು ಆದ ಸಹಾಯಕ ಪ್ರಾದೇಶಿಕ ಅಧಿಕಾರಿಗಳು ರವರ ಮಾರ್ಗದರ್ಶನದಂತೆ ಮೋಟಾರು ವಾಹನ ಕಾಯ್ದೆ 1988, ಕೇಂದ್ರ ಮೋಟಾರು ವಾಹನಗಳ ನಿಯಮ 1989 ಮತ್ತು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮ 1957, ಆಗಿಂದಾಗ್ಯೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳು, ಅಧಿ ಸೂಚನೆಗಳು, ಮೇಲಾಧಿಕಾರಿಗಳಿಂದ ನೀಡಲ್ಪಟ್ಟ ಸಲಹೆಗಳು, ಆದೇಶಗಳು, ಸೂಚನೆಗಳು ಇವುಗಳಂತೆ ಕಾರ್ಯ ನಿರ್ವಹಿಸಲಾಗುತ್ತದೆ.

**v. ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು :**

1) ನಿರ್ವಹಣೆಗಾಗಿ ಪಾಲಿಸುವ ನಿಯಮಗಳು, ಕಾನೂನುಗಳು, ನಿರ್ದೇಶನಗಳು, ಮ್ಯಾನ್ಯುಯಲ್‌ಗಳು :

   ಅ) ಮೋಟಾರು ವಾಹನಗಳ ಕಾಯ್ದೆ, 1988.

   ಆ) ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989.

   ಇ) ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989.

   ಈ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ, 1957.

   ಉ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು, 1957.

ಊ) ಕರ್ನಾಟಕ ಫೈನಾನ್ಸಿಯಲ್ ಕೋಡ್, ಕರ್ನಾಟಕ ಟ್ರೆಜರಿ ಕೋಡ್, ಮ್ಯಾನ್ಯುಯಲ್ ಆಫ್ ಕಂಟಿನ್ಜೆಂಟ್ ಆಫ್ ಎಕ್ಸ್‌ಪೆಂಡಿಚರ್ ಮತ್ತು ಬಜೆಟ್ ಮ್ಯಾನ್ಯುಯಲ್.

2) ವಿಷಯ ನಿರ್ವಾಹಕರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಮಾರ್ಗದರ್ಶನದಂತೆ ಕೆಲಸ ನಿರ್ವಹಿಸುತ್ತಾರೆ.

**vi. ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ :**

1. ಹಣ ಘೋಷಣಾ ವಹಿ.
2. ಹಾಜರಾತಿ ಪುಸ್ತಕ.
3. ನಗದು ಪುಸ್ತಕ, ದಂಡ, ಫೀಸ್ ವಸೂಲಿಸಿರುವ ಬಗ್ಗೆ.
4. ರಾಜಸ್ವ ಸಂದಾಯ ವಹಿ.
5. ಅನುದಾನ ಮತ್ತು ವೆಚ್ಚದ ವಹಿ.
6. ವೇತನ ಪಾವತಿ ವಹಿ.
7. ಸಾಮಾನ್ಯ ನಗದು ಪುಸ್ತಕ.
8. ಎ ಚಲನ್, ಬಿ ಚಲನ್ ಮತ್ತು ಸಿಆರ್‌ಆರ್ ದಾಸ್ತಾನು ವಹಿಗಳು.
9. ಚಲನ್ (ಗಣಕ ಯಂತ್ರದ ಮೂಲಕ ಪ್ರಿಂಟ್ ಮಾಡಲು ಇರುವ) ದಾಸ್ತಾನು ವಹಿ.
10. ಪೀಠೋಪಕರಣಗಳ ದಾಸ್ತಾನು ಪುಸ್ತಕ.
11. ಗಣಕಯಂತ್ರ ಇತರ ಉಪಕರಣಗಳ ದಾಸ್ತಾನು ಪುಸ್ತಕ.
12. ರಾಜಸ್ವ ವಸೂಲಾತಿ ವಹಿ.

13. ಚಾರ್ಜ್ ವಹಿಸುವ ವಹಿ ಮತ್ತು ಕಡತಗಳು.

14. ವಾಹನ ಲಾಗ್ ಪುಸ್ತಕ.

15. ಗೃಹ ರಕ್ಷಕ ಸಿಬ್ಬಂದಿ ಕಡತ.

16. ದೂರವಾಣಿ ಕಡತ.

17. ಕಛೇರಿ ವಾಹನ ಕಡತ.

18. ಜನರೇಟರ್ ಕಡತ.

19. ಜನರೇಟರ್ ವಹಿ.

20. ಡಿ.ಸಿ. ಬಿಲ್ ವಹಿ.

21. ಟಪಾಲು ಸ್ವೀಕೃತಿ ಪುಸ್ತಕ.

22. ಟಪಾಲು ರವಾನೆ ಪುಸ್ತಕ.

23. ಕಛೇರಿಯಲ್ಲಿ ಕಾರ್ಯ ನಿರ್ವಹಿಸಿರುವ ಅಧಿಕಾರಿಯವರ ವಿವರಗಳ ಕಡತ.

24. ಸರ್ವರ್ ಲಾಗ್ ವಹಿ.

25. ಡೇಟಾ ಬಾಕ್ ಆಫ್ ವಹಿ.

26. ಸರ್ವರ್ ತೊಂದರೆಯ ವಹಿ.

27. ಡೇಟಾಬೇಸ್ ತೊಂದರೆಯ ವಹಿ.

28. ಸಾಮಾನ್ಯ ರಸೀದಿ ಪುಸ್ತಕ.

29. ಸಿ.ಆರ್. ಪುಸ್ತಕ ದಾಸ್ತಾನು.

**vii. ಕಾರ್ಯ ನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು :**

ತನಿಖಾ ಠಾಣೆಗೆ ಅನ್ವಯಿಸುವುದಿಲ್ಲ.

**viii.** **ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯುಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತದೆಯೇ ಎಂಬ ಪಟ್ಟಿ :**

ತನಿಖಾ ಠಾಣೆಗೆ ಅನ್ವಯಿಸುವುದಿಲ್ಲ.

**ix.** **ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ :**

| ಕ್ರ. ಸಂ. | ಹೆಸರು | ಹುದ್ದೆ | ದೂರವಾಣಿ ಸಂಖ್ಯೆ | ವಿಳಾಸ |
|---|---|---|---|---|
| 1. | ಆನಂದಗೌಡ | ಎ.ಆರ್.ಟಿ.ಓ. | 080–27844737 | ಅತ್ತಿಬೆಲೆ ತನಿಖಾ ಠಾಣೆ, ಅತ್ತಿಬೆಲೆ. |
| 2. | ಬಿ.ಲೋಕೇಶ್ | ಚಾಲಕ | 080–27844737 | ಅತ್ತಿಬೆಲೆ ತನಿಖಾ ಠಾಣೆ, ಅತ್ತಿಬೆಲೆ. |

**x.** **ವಿನಿಮಯಗಳನ್ನು ಉಪಸಂಬಂಧಿಸಿರುವಂತೆ ಪರಿಹಾರ ವ್ಯವಸ್ಥೆಯು ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ :**

**(31–03–2017 ರ ಅಂತ್ಯಕ್ಕೆ)**

| ಕ್ರ. ಸಂ. | ಅಧಿಕಾರಿಗಳ/ಸಿಬ್ಬಂದಿಗಳ ಹೆಸರು | ಒಟ್ಟು ವೇತನ | | | | | |
|---|---|---|---|---|---|---|---|
| | | ಮೂಲ ವೇತನ | ತುಟ್ಟಿಭತ್ಯೆ | ಮನೆ ಬಾಡಿಗೆ | ಗ್ರಾಮೀಣ ಭತ್ಯೆ | ಇತರೆ | ಒಟ್ಟು ಮೊತ್ತ |
| 1. | ಆನಂದ ಗೌಡ | 36,300 | 15,700 | 3,630 | - | - | 55,630 |
| 2. | ಬಿ. ಲೋಕೇಶ್ | 13,000 | 5,623 | 1,300 | - | 535 | 20,458 |

**xi.** **ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ :**

**01–04–2016 ರಿಂದ 31–03–2017**

| ಹೆಡ್ ಆಫ್ ಅಕೌಂಟ್ | ಅನುದಾನ ಬಿಡುಗಡೆ | ವೆಚ್ಚ ರೂ.ಗಳಲ್ಲಿ |
|---|---|---|
| 051 ಕಛೇರಿ ವೆಚ್ಚಗಳು | 5,50,575 | 4,61,825 |
| 195 ಸಾರಿಗೆ ವೆಚ್ಚಗಳು | 2,41,699 | 2,20,887 |
| 059 ಇತರೆ ವೆಚ್ಚಗಳು | 1,0000 | 96,447 |

**xii.** **ಹಂಚಿಕೆ ಮಾಡಲಾದ ಮೊಬಲಗು ಒಳಗೊಂಡು ಸಹಾಯ ಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು :**

ಯಾವುದೂ ಇಲ್ಲ.

**xiii.** **ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು :**

ಯಾವುದೂ ಇಲ್ಲ.

**xiv.** **ಲಭ್ಯವಿರುವ ಅಥವಾ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು :**

ದಿನಾಂಕ: 10–01–2011 ರಿಂದ ಕಛೇರಿಯ ರಾಜಸ್ವ ವಸೂಲಾತಿ ಪರವಾನಿಗೆಗಳ ನೀಡಿಕೆ ಮುಂತಾದ ಕೆಲಸ ಕಾರ್ಯಗಳನ್ನು ಗಣಕೀಕರಣದಲ್ಲಿ ನಿರ್ವಹಿಸಲಾಗುತ್ತಿದೆ.

**xv.** **ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು :**

ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯವನ್ನಾಗಲಿ ಅಥವಾ ವಾಚನಾಲಯವಾಗಲಿ ನಿರ್ವಹಿಸುತ್ತಿರುವುದಿಲ್ಲ.

**xvi.** **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳು :**

| ಕ್ರಮ ಸಂಖ್ಯೆ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಾಧಿಕಾರಿ |
|---|---|---|---|
| 1. | ಆನಂದ ಗೌಡ<br>ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಅತ್ತಿಬೆಲೆ ತನಿಖಾ ಠಾಣೆ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.<br>ಪಿನ್‌ಕೋನ್ – 562 107.<br>ದೂರವಾಣಿ ಸಂಖ್ಯೆ: 080–27844737 | 1. ಕರ್ತವ್ಯ ನಿರತ ಹಿರಿಯ ಮೋಟಾರು ವಾಹನ ನಿರೀಕ್ಷಕರು.<br>2. ಮೋಟಾರು ವಾಹನ ನಿರೀಕ್ಷಕರು.<br>ಅತ್ತಿಬೆಲೆ ತನಿಖಾ ಠಾಣೆ,<br>ಆನೇಕಲ್ ತಾಲ್ಲೂಕು,<br>ಬೆಂಗಳೂರು ಜಿಲ್ಲೆ.<br>ಪಿನ್‌ಕೋಡ್ – 562 107.<br>ದೂರವಾಣಿ ಸಂಖ್ಯೆ: 080 27844737 | ಶ್ರೀ ಹೆ.ಟಿ. ಹಾಲಸ್ವಾಮಿ<br>ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು.<br>4ನೇ ಮಹಡಿ,<br>ಪೋಡಿಯಂ ಬ್ಲಾಕ್,<br>ವಿ.ವಿ. ಟವರ್,<br>ಬೆಂಗಳೂರು–560 001.<br>ದೂರವಾಣಿ ಸಂಖ್ಯೆ: 080–22866670 |

**ಸಾರಿಗೆ ಇಲಾಖೆ ವೆಬ್‌ಸೈಟ್ : http:/rto.kar.nic.in**

**ಇ–ಮೇಲ್ : ckpatbl.rto.ka@nic.in**

**xvii. ನಿಯಮಿಸಬಹುದಾದಂತಹ ಇತರ ಮಾಹಿತಿ :**

***ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ***
***ಅತ್ತಿಬೆಲೆ ತನಿಖಾ ಠಾಣೆ***